ದಿಃ 29.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಜಿ.ಎನ್.ಆರ್. 1 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದಃ**

1 ರಿಂದ 4 ನೇ ಪ್ರತಿವಾದಿಗಳ ಪರಿಚಯ ನನಗಿದೆ. ನನಗೆ ಓದಲು ಬರೆಯಲು ಬರುವುದಿಲ್ಲ. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಮೂರು ಜನರು ಹೆಣ್ಣು ಮಕ್ಕಳು ಇದ್ದಾರೆ. ದಾವಾ ಆಸ್ತಿಯು ನನ್ನ ತಂದೆಗೆ ಪಸಲರೆಡ್ಡಿ ರವರಿಂದ ಬಂದಿರುತ್ತದೆ. ನಿಪಿ-2 ರ ಕ್ರಯಪತ್ರದಲ್ಲಿ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 10 ಗಜ ಹಾಗೂ ಉತ್ತರ-ದಕ್ಷಿಣ 16 ಗಜ ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಾವೆಯ ಶೆಡ್ಯೂಲ್‌ನಲ್ಲಿ ದಾವಾ ಆಸ್ತಿಯ ವಿಸ್ತೀರ್ಣವನ್ನು ಪೂರ್ವ-ಪಶ್ಚಿಮ 16.2 ಗಜ ಹಾಗೂ ಉತ್ತರ-ದಕ್ಷಿಣ 18.7 ಗಜ ಎಂದು ನಮೂದಿಸಿರುತ್ತೇನೆ.

ನಿಪಿ-2 ರ ಕ್ರಯಪತ್ರದಲ್ಲಿ ಪ್ರಕಾರ ಸಂಖ್ಯೆ 1 ಎಂದು ನಮೂದಾಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ-3 ರ ದಾಖಲೆಯನ್ನು ಪಂಚಾಯವರೊಂದಿಗೆ ಸೇರಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ನಿಪಿ-3 ರಲ್ಲಿ ಸುಳ್ಳು ವಿಸ್ತೀರ್ಣವನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಹೇಳಿರುವ ವಿಸ್ತೀರ್ಣದ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆಯ ಕಾಲದಿಂದಲೂ ನಾವು ಸ್ವಾಧೀನದಲ್ಲಿದ್ದೇವೆ ಹಾಗೂ ನಿಪಿ-2 ರ ಕ್ರಯಪತ್ರದಲ್ಲಿರುವ ವಿಸ್ತೀರ್ಣದ ಪ್ರಕಾರ ದಾಖಲೆಯನ್ನು ನೀಡಿ ಎಂದು ಪಂಚಾಯತಿಯವರಿಗೆ ಕೋರಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪಂಚಾಯತಿಯವರಿಗೆ ನಾನು ನಿಪಿ-2 ರ ಕ್ರಯಪತ್ರವನ್ನು ನೀಡಿದ್ದೆನು ಆದರೆ ಪಂಚಾಯತಿಯವರೊಂದಿಗೆ ನಾನು ಸೇರಿಕೊಂಡು ನಿಪಿ-3 ರಲ್ಲಿ ತಪ್ಪು ವಿಸ್ತೀರ್ಣವನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಗೌರಿಬಿದನೂರಿನ ತಹಶೀಲ್ದಾರ್ ರವರು ನೀಡಿರುವ ಪ್ರಜಾಸಂಖ್ಯೆ ಮತ್ತು ಗ್ರಾಮದ

ಖಾನೇಶುಮಾರಿಯ ದೃಢೀಕೃತ ನಕಲನ್ನು ತೋರಿಸಿ, ಸಾಕ್ಷಿಯು ಅದರಲ್ಲಿ ಕ್ರಮಸಂಖ್ಯೆ 1 ರಲ್ಲಿರುವ ತನ್ನ ತಂದೆಯ ಹೆಸರು ಮತ್ತು ಪೂರ್ವ-ಪಶ್ಚಿಮ ಮತ್ತು ಉತ್ತರ-ದಕ್ಷಿಣದಲ್ಲಿ ನಮೂದು ಮಾಡಿರುವ ವಿಸ್ತೀರ್ಣಗಳನ್ನು ನೋಡಿ ಗುರುತಿಸಿದ್ದು, ಸದರಿ ಖಾನೇಶುಮಾರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿಯು ಗುರುತಿಸಿರುವ ತನ್ನ ತಂದೆಯ ಹೆಸರು ಮತ್ತು ವಿಸ್ತೀರ್ಣಗಳನ್ನು ನಿಡಿ-1(ಎ) ಎಂದು ಗುರುತಿಸಲಾಯಿತು.

ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು, ಅಧಿಕಾರ ಅಥವಾ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಮತ್ತು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ನಮೂದಿಸಿರುವ ಸ್ವತ್ತಿಗೂ ನಿಪಿ-2 ರಲ್ಲಿ ನಮೂದಿಸಿರುವ ಸ್ವತ್ತಿಗೂ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ನಾವು ಹಲವಾರು ವರ್ಷಗಳಿಂದ ಮನೆ ಕಟ್ಟಿಸಿಕೊಂಡು ವಾಸವಿದ್ದೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು